ದೇವಸ್ಥಾನಗಳ ವಿವರ

22 (43)

ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯಡಿಯಲ್ಲಿ ಬರುವ ದೇವಾಲಯಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು);

ಆ) ಈ ದೇವಾಲಯಗಳಿಂದ ಕಳೆದ ಮೂರು ವರ್ಷಗಳಲ್ಲಿ ಬಂದಿರುವ ಆದಾಯ ಹಾಗೂ ವೆಚ್ಚ ಎಷ್ಟು (ವಿವರ ನೀಡುವುದು);

ಇ) ಈ ದೇವಾಲಯಗಳಲ್ಲಿ ಆದಾಯವಿದ್ದರೂ ಮೂಲಭೂತ ಸೌಕರ್ಯ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ದೇವಾಲಯದ ಆದಾಯದ ಹಣವನ್ನು ದೇವಾಲಯಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ವಿನಿಯೋಗಿಸಲು ಸರ್ಕಾರ ಸುತ್ತೋಲೆ ಹೊರಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೊಲವಾ ಶ್ರೀ ನಿವಾಸ ಪೂಜಾರಿ

(ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 288 ಅಧಿಸೂಚಿತ ದೇವಾಲಯಗಳಿರುತ್ತವೆ. (ಆ ಸಂಬಂಧ ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ)

ಆ) ಅಧಿಸೂಚಿತ ದೇವಾಲಯಗಳನ್ನು ಅವುಗಳ ಆದಾಯಕ್ಕೆ ಅನುಗುಣವಾಗಿ ಪ್ರವರ್ಗ 'ಎ', 'ಬಿ' ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿರುತ್ತದೆ.

ರೂ.25.00 ಲಕ್ಷ ಮೇಲ್ಪಟ್ಟು ವಾರ್ಷಿಕ ಆದಾಯವಿರುವ ಸಂಸ್ಥೆಗಳನ್ನು ಸಮೂಹ 'ಎ' ಎಂದೂ, ರೂ.25.00 ಲಕ್ಷದೊಳಗಿರುವ ರೂ.5.00 ಲಕ್ಷದ ಮೇಲ್ಪಟ್ಟ ಆದಾಯವಿರುವ ಸಂಸ್ಥೆಗಳನ್ನು ಸಮೂಹ 'ಬಿ' ಎಂದೂ, ರೂ.5.00 ಲಕ್ಷದ ಒಳಗಿನ ಆದಾಯವಿರುವ ಸಂಸ್ಥೆಗಳನ್ನು ಸಮೂಹ 'ಸಿ' ಎಂದು ವರ್ಗೀಕರಿಸಲಾಗಿರುತ್ತದೆ. 288 ಅಧಿಸೂಚಿತ ದೇವಾಲಯಗಳಲ್ಲಿ ಒಂದು ಸಮೂಹ 'ಎ' ಮತ್ತು ಎರಡು ಸಮೂಹ 'ಬಿ'

ವರ್ಗಕ್ಕೆ ಸೇರಿದ ದೇವಾಲಯಗಳಿರುತ್ತವೆ. ಈ ಮೂರು ದೇವಾಲಯಗಳ ಕಳೆದ ಮೂರು ವರ್ಷಗಳ ಆದಾಯ ಮತ್ತು ವೆಚ್ಚದ ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ. ಉಳಿದ 275 ದೇವಾಲಯಗಳು ಸಮೂಹ 'ಸಿ' ವರ್ಗಕ್ಕೆ ಸೇರಿದ ದೇವಾಲಯಗಳಾಗಿರುತ್ತವೆ. ಈ ದೇವಾಲಯಗಳಿಗೆ ತಲಾ 12,000/– ತಸ್ತೀಕ್ ನಿಗದಿಪಡಿಸಿದ್ದು, ಈ ಮೊತ್ತವನ್ನು ದೇವಾಲಯದ ನಿತ್ಯ ಪೂಜಾ ಸಾಮಗ್ರಿಗಳನ್ನು ಕೊಳ್ಳಲು ವಿನಿಯೋಗಿಸಿ ಕೊಳ್ಳಲಾಗುತ್ತಿದೆ.

ಇ) ಹೌದು.

ಈ) ರಾಜ್ಯದಲ್ಲಿ ಎಲ್ಲಾ ದೇವಾಲಯಗಳ ಆದಾಯವನ್ನು ಆಧರಿಸಿ ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 32 ಅಂಶಗಳ ಕಾರ್ಯಕ್ರಮದ ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಸಂಖ್ಯೆ ಸಿಎನ್ ಆರ್ 1 ಸಿಆರ್ 346/10–11, ದಿನಾಂಕ:22.03.2011ರಲ್ಲಿ ಸುತ್ತೋಲೆಯನ್ನು ಸಹ ಹೊರಡಿಸಿರುತ್ತಾರೆ.

(ಸಂಖ್ಯೆ:ಕಂಇ 96 ಮುಸಪ್ರ 2012)

ಸಹಿ
(ಕೋಟಾ/ ಶ್ರೀನಿವಾಸ ಪೂಜಾರಿ
ಮುಜರಾಯಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು)

ಅನುಬಂಧ–1

1	2	3	4	5	6
		5. Bhalki	Bhalki	1	Balakeshwara Devasthana
			Bhalki	2	Mahadeva Devasthana
			Bhalki	3	Sangameshwara Devasthana
			Bhalki	4	lakshmi
			Bhalki	5	Vittala
			Bhalki	6	Dharmeshwara Devasthana
			Bhalki	7	Khandeshwara Devasthana
			Bhalki	8	Hanumana Devasthana
			Bhalki	9	Hanumana hulasura Besa
			Bhalki	10	Khumbeshwara Besa
			Devinag abalki	11	Jagadamba Devasthana
			Bhalki Tanda	12	Hanumana Devasthana
			Bhalki Tanda	13	Jagadamba Devasthana
			Bhalki	14	Mahadeva shankaranga Devasthana
			Bhalki	15	Narayanabava manta
			Dhadagi	16	Hanumana Devasthana
			Dhadagi	17	Lakshmi Devasthana
			Dhadagi	18	Khumbeshwara Devasthana

1	2	3	4	5	6
			Kallavadi	19	Hanumana Devasthana
			Kuntisirsi	20	Hanumana Devasthana
			Chikalachanda	21	Hanumana Devasthana
			Chikalachanda	22	Mahadeva Devasthana
			Marura	23	Hanumana Devasthana
			Marura	24	Mahadeva Devasthana
			Siddshwara	25	Revanasiddeshwara Devasthana
			Talavada.K	26	Hanumana Devasthana
			Talavada.K	27	Siddalingeshwara Devasthana
			Karadyala	28	Hanumana Devasthana
			Karadyala	29	Sathyavathi Devasthana
			Kadalabada	30	Hanumana Devasthana
			Madakatti	31	Mahadeva Devasthana
			Madakatti	32	Ekanatha Devasthana
			Madakatti	33	Hanumana Devasthana
			Madakatti	34	Basaveshwara Devasthana
			Madakatti	35	Gubbalaellamma Devasthana
			Haranala	36	Hanumana Devasthana

1	2	3	4	5	6
			Haranala	37	Jai Bhavani Devasthana
			Needebana	38	Hanumana Devasthana
			Joladabaka	39	Hanumana Devasthana
			Joladabaka	40	Panduranga Devasthana
			Joladabaka	41	Basaveshwara Devasthana
			Joladabaka	42	Basava Devasthana
			Ekalaspura vadi	43	Hanumana Devasthana
			Kotagira	44	Hanumana Devasthana
			Gorachincholi	45	Hanumana Devasthana
			Gorachincholi	46	Mahadeva Devasthana
			Ganeshapuravadi	47	Hanumana Devasthana
			Ramathirthavadi	48	Ramalingeshwara Devasthana
			Dharajavadi	49	Hanumana Devasthana
			Dharajavadi	50	Jai Bhavani Devasthana
			Dharajavadi Tanda	51	Hanumana Devasthana
			Dharajavadi Tanda	52	Jai Bhavani Devasthana
			Kotagyalavadi	53	Hanumana Devasthana
			Saidapuravadi	54	Hanumana Devasthana
			Korura	55	Hanumana Devasthana
			Bacholaga	56	Mahadeva Devasthana

1	2	3	4	5	6
			Bacholaga	57	Hanumana Devasthana
			Khachincholi	58	Hanumana Devasthana
			Khachincholi	59	Shanthalingehswara Devasthana
			Khachincholi	60	Panduranga Devasthana
			Enakura	61	Hanumana Devasthana
			Navadagi	62	Revanaiah Devasthana
			Navadagi	63	Hanumana Devasthana
			Marambi	64	Mahadeva Devasthana
			Marambi	65	Panduranga Devasthana
			Marambi	66	Hanumana Devasthana
			Kurubakhelagi	67	Hanumana Devasthana
			Kurubakhelagi	68	Basaveshwara Devasthana
			Chalakapura	69	Hanumana Devasthana
			Davaragao	70	Hanumana Devasthana
			Halagorta	71	Hanumana Devasthana
			Huccha	72	Hanumana Devasthana
			Huccha	73	Sharabasaveshwara Devasthana
			Huccha	74	Basaveshwara Devasthana
			Tugava C	75	Hanumana Devasthana

1	2	3	4	5	6
			Sikandarabad avadi	76	Hanumana Devasthana
			Sikandarabad avadi	77	Mahadeva Devasthana
			Masimadu	78	Hanumana Devasthana
			Kapalapura	79	Jaibhavani Devasthana
			Bhagyanagar a	80	Hanumana Devasthana
			Varavatti	81	Hanumana Devasthana
			Honnalli	82	Hanumana Devasthana
			Honnalli	83	Beeralingeshwar a Devasthana
			Byalahalli	84	Hanumana Devasthana
			Mavinahalli	85	Siddeshwara Devasthana
			Baradapura	86	Hanumana Devasthana
			Nelavada	87	Hanumana Devasthana
			Halabarga	88	Hanumana Devasthana
			Halabarga	89	Jai Bhavani Devasthana
			Halabarga	90	Ellalinga Devasthana
			Dhannur.S	91	Hanumana Devasthana
			Dhannur.S	92	Veerabhadreshw ara Devasthana
			Dhannur.S	93	Basaveshwara Devasthana
			Kanaji	94	Hanumana Devasthana

1	2	3	4	5	6
			Kanaji	95	Lakshmi Devasthana
			Kona Melakunda	96	Veerabhadreshwara Devasthana
			Konamelakunda	97	Sangameshwara Devasthana
			Konamelakunda	98	Hanumana Devasthana
			Jyanti	99	Hanumana Devasthana
			Nelagi	100	Hanumana Devasthana
			Tegampura	101	Hanumana Devasthana
			Tegampura	102	Panduranga Devasthana
			Kosama	103	Hanumana Devasthana
			Kosama	104	Basaveshwara Devasthana
			Kosama	105	Beeralingeshwara Devasthana
			Nagur.K	106	Hanumana Devasthana
			Hunaji.K	107	Hanumana Devasthana
			Byalahalli.K	108	Hanumana Devasthana
			Byalahalli.K	109	Beeralingeshwara Devasthana
			Aliyabad.K	110	Hanumana Devasthana
			Godhihipparaga	111	Hanumana Devasthana
			Taranalli	112	Hanumana Devasthana
			Taranalli	113	Revappaiah & Mallikarjuna

1	2	3	4	5	6
			Kamalapura	114	Hanumana Devasthana
			Halahalli,K	115	Hanumana Devasthana
			Halahalli,K	116	Basaveshwar a Devasthana
			Halahalli,K	117	Beeralingesh wara Devasthana
			Halahalli,K	118	Ellalinga Devasthana
			Halahalli,K	119	Sangameshw ara kalyana Mantapa
			Niramanahalli	120	Hanumana Devasthana
			Niramanahalli Tanda	121	Hanumana Devasthana
			Rudanura	122	Hanumana Devasthana
			Rudanura	123	Beeralingesh wara Devasthana
			Rudanura Tanda	124	Hanumana Devasthana
			Malachapura	125	Hanumana Devasthana
			Malachapura	126	Beeralingesh wara Devasthana
			Khanapura	127	Hanumana Devasthana
			Khanapura	128	Mylara Mallanna Devasthana
			Dhannur Tanda	129	Hanumana Devasthana
			Nittura.B	130	Hanumana Devasthana
			Nittura.B	131	Mahdeva Devasthana
			Nittura.B	132	Mohanappa Devasthana

1	2	3	4	5	6
			Hupala	133	Hanumana Devasthana
			Hupala	134	Mahadeva Devasthana
			Amadabada	135	Hanumana Devasthana
			Hajanala	136	Hanumana Devasthana
			Goranala	137	Hanumana Devasthana
			Nagarala	138	Hanumana Devasthana
			Nagarala	139	Beerappa Devasthana
			Valasanga	140	Panduranga Devasthana
			Valasanga	141	Hanumana Devasthana
			Valasanga	142	Mahadeva Devasthana
			Ambesangali	143	Hanumana Devasthana
			Ambesangali	144	Hanumana Devasthana
			Beeri.K	145	Hanumana Devasthana
			Shivana	146	Hanumana Devasthana
			Shivana	147	Channabasav amath Devasthana
			Shivana	148	Beeralingesh wara Devasthana
			Shivana	149	Mahadeva Devasthana
			Shivana	150	Lakshmi Devasthana
			Talavada M	151	Hanumana Devasthana

1	2	3	4	5	6
			Talavada M	152	Beeralingeshwara Devasthana
			Shamashadapuravadi	153	Hanumana Devasthana
			Me:melakunda	154	Hanumana Devasthana
			Me:melakunda	155	Beeralingeshwara Devasthana
			Ka:Tungava	156	Hanumana Devasthana
			Ka:Tungava	157	Mahadeva Devasthana
			Hunaji.A	158	Hanumana Devasthana
			Hunaji.A	159	Panduranga Devasthana
			Tamagyala	160	Hanumana Devasthana
			Tamagyala	161	Bhouda Devasthana
			Jayagam	162	Hanumana Devasthana
			Jayagam	163	Revappaiah
			Beeri.B	164	Hanumana Devasthana
			Beeri.B	165	Beeralingeshwara Devasthana
			Somapura	166	Hanumana Devasthana
			Kalaasadala	167	Panduranga Devasthana
			Kalaasadala	168	Hanumana Devasthana
			Alandi	169	Hanumana Devasthana

1	2	3	4	5	6
			Alandi	170	Panduranga Devasthana
			Bhadasan ghavi	171	Hanumana Devasthana
			Atanuru	172	Hanumana Devasthana
			Hacchika matta	173	Hanumana Devasthana
			Kathuvadi	174	Hanumana Devasthana
			Sayanaga va	175	Hanumana Devasthana
			Sayanaga va	176	Mahadeva Devasthana
			Sayanaga va	177	Lakshmi Devasthana
			Sayanaga va	178	Panduranga Devasthana
			Murala	179	Hanumana Devasthana
			Kodabi	180	Hanumana Devasthana
			Korura	181	Hanumana Devasthana
			Khasemp ura	182	Hanumana Devasthana
			Chandapu ra	183	Hanumana Devasthana
			Kotagyala	184	Hanumana Devasthana
			Kotagyala	185	Dattatri Devasthana
			Dongaragi	186	Hanumana Devasthana
			Jainapur	187	Hanumana Devasthana

1	2	3	4	5	6
			Aliabad	188	Hanumana Devasthana
			Bhagavan vadi	189	Hanumana Devasthana
			Balura	190	Hanumana Devasthana
			Balura Tanda	191	Hanumana Devasthana
			Siddapura vadi	192	Hanumana Devasthana
			Siddapura vadi	193	Sideshwara Devasthana
			Lakhanag ava	194	Hanumana Devasthana
			Lakhanag ava	195	Panduranga Devasthana
			Lakhanag ava	196	Beeralingeshw ara Devasthana
			Lakhanag ava	197	Basaveshwara Devasthana
			Lakhanag ava	198	Mahadeva Devasthana
			Bhatambr a	199	Hanumana Devasthana
			Bhatambr a	200	Basaveshwara Devasthana
			Bhatambr a	201	Beeralingeshw ara Devasthana
			Bhatambr a	202	Veerabhadres hwara Devasthana
			Kakanala	203	Ganesha Devasthana
			Kakanala	204	Hanumana Devasthana
			Lenjavada	205	Hanumana Devasthana
			Lenjavada	206	Maragemma Devasthana

1	2	3	4	5	6
			Lenjavada	207	Mahadeva Devasthana
			Telagam	208	Hanumana Devasthana
			Telagam	209	Lakshmi Devasthana
			Telagam	210	Maragemma Devasthana
			Donagapur a	211	Doneshwara Devasthana
			Donagapur a	212	Veerahanuman Devasthana
			Donagapur a	213	Lakshmi Devasthana
			Kesara Jevalaga	214	Hanumana Devasthana
			Kesara Jevalaga	215	Mohaneshwara Devasthana
			Kesara Jevalaga	216	Ganesha Devasthana
			Kesara Jevalaga	217	Lakshmi Devasthana
			Ladha	218	Lakshmi Devasthana
			Ladha	219	Vittala Devasthana
			Ladha	220	Hanumana Devasthana
			Ladha	221	Mahadeva Devasthana
			Belgaum	222	Hanumana Devasthana
			Belgaum	223	Lakshmi Devasthana
			Munikashw ara	224	Hanumana Devasthana
			Manikeshw ara	225	Mahadeva Devasthana

1	2	3	4	5	6
			Manikesh wara	226	Panduranga Devasthana
			Srimali	227	Hanumana Devasthana
			Srimali	228	Panduranga Devasthana
			Srimali	229	Lakshmi Devasthana
			Srimali	230	Mahadeva Devasthana
			Attaraga	231	Hanumana Devasthana
			Attaraga	232	Valahadeva Devasthana
			Attaraga	233	Panduranga Devasthana
			Jamakha ndi	234	Hanumana Devasthana
			Jamakha ndi	235	Mahadeva Devasthana
			Jamakha ndi	236	Vittal Devasthana
			Pandari	237	Lakshmi Devasthana
			Pandari	238	Hanumana Devasthana
			Khudava napura	239	Hanumana Devasthana
			Khudava napura	240	Lakshmi Devasthana
			Khudava napura	241	Panduranga Devasthana
			Halasi.I	242	Lakshmi Devasthana
			Halasi.I	243	Vittal Devasthana
			Halasi.I	244	Hanumana Devasthana
			Halasi.I	245	Mahadeva Devasthana

1	2	3	4	5	6
			Alavayi	246	Hanumana Devasthana
			Alavayi	247	Panduranga Devasthana
			Alavayi	248	Mahadeva Devasthana
			Alavayi	249	Lakshmi Devasthana
			Alavayi vadi	250	Hanumana Devasthana
			Naradasangama	251	Hanumana Devasthana
			Naradasangama	252	Lakshmi Devasthana
			Kuntagaum	253	Hanumana Devasthana
			Kuntagaum	254	Mahadeva Devasthana
			Kuntagaum	255	Lakshmi Devasthana
			Kuntagaum	256	Vittal Devasthana
			R Goundagaum	257	Hanumana Devasthana
			R Goundagaum	258	Mahadeva Devasthana
			R Goundagaum	259	Beeralingeswara Devasthana
			R Goundagaum	260	Someshwara Devasthana
			R Goundagaum	261	Lakshmi Devasthana
			Inchur	262	Veerahanuman Devasthana
			Inchur	263	Lakshmi Devasthana
			Inchur	264	Panduranga Devasthana

1	2	3	4	5	6
			Vagalagaum	265	Hanumana Devasthana
			Vagalagaum	266	Veerabhadre shwara Devasthana
			Vagalagaum	267	Lakshmi Devasthana
			Gunjaraga	268	Hanumana Devasthana
			Gunjaraga	269	Beeralinges hwara Devasthana
			Gunjaraga	270	Lakshmi Devasthana
			Tugao echa	271	Hanumana Devasthana
			Tugao echa	272	Lakshmi Devasthana
			Vanjarakhed a	273	Hanumana Devasthana
			Vanjarakhed a	274	Lakshmi Devasthana
			Vanjarakhed a	275	Mahadeva Devasthana
			Jiragyala	276	Hanumana Devasthana
			Jiragyala	277	Lakshmi Devasthana
			Elamavadi	278	Hanumana Devasthana
			Elamavadi	279	Lakshmi Devasthana
			Kongali	280	Hanumana Devasthana
			Kongali	281	Lakshmi Devasthana
			Kongali	282	Mahadeva Devasthana
			Kongali	283	Dantatri Devasthana

1	2	3	4	5	6
			Joladabaka	284	Lakshmi Devasthana
			Jaladabaka	285	Mahadeva Devasthana
			Jaladabaka	286	Allamaprabhu
			Anadavadi	287	Hanumana Devasthana
			Bhalki	288	Rameswara Devasthana

ಸಹಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ).

ಅನುಬಂಧ–2

(ರೂ.ಲಕ್ಷಗಳಲ್ಲಿ)

ಕ್ರ ಸಂ	ಪ್ರವರ್ಗ 'ಎ' ದೇವಾಲಯಗಳ ಹೆಸರು	2009–10ನೇ ಸಾಲಿನ		2010–11ನೇ ಸಾಲಿನ		2011–12ನೇ ಸಾಲಿನ	
		ಆದಾಯ	ವೆಚ್ಚ	ಆದಾಯ	ವೆಚ್ಚ	ಆದಾಯ	ವೆಚ್ಚ
1	ಶ್ರೀ ಮೈಲಾರ ಮಲ್ಲಣ್ಣ ದೇವಾಲಯ, ಭಾಲ್ಕಿ	30.00	23.00	30.78	30.78	42.75	38.48

(ರೂ.ಲಕ್ಷಗಳಲ್ಲಿ)

ಕ್ರ ಸಂ	ಪ್ರವರ್ಗ 'ಬಿ' ದೇವಾಲಯಗಳ ಹೆಸರು	2009–10ನೇ ಸಾಲಿನ		2010–11ನೇ ಸಾಲಿನ		2011–12ನೇ ಸಾಲಿನ	
		ಆದಾಯ	ವೆಚ್ಚ	ಆದಾಯ	ವೆಚ್ಚ	ಆದಾಯ	ವೆಚ್ಚ
1	ಶ್ರೀ ಹನುಮಾನ ಮಂದಿರ ಚಳಕಾಪುರ,ಭಾಲ್ಕಿ ತಾಲ್ಲೂಕು	8.25	4.80	30.78	13.34	12.00	6.85
2	ಶ್ರೀ ಸಿದ್ದೇಶ್ವರ ಮಂದಿರ, ಸಿದ್ದೇಶ್ವರ ಗ್ರಾಮ ಭಾಲ್ಕಿ ತಾಲ್ಲೂಕು	7.00	1.00	7.00	1.00	5.75	2.33

ಸಹಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಎನ್‌ಆರ್/1/ಸಿಆರ್/346/2010–11 ಆಯುಕ್ತರವರ ಕಾರ್ಯಾಲಯ,
ಧಾರ್ಮಿಕ ದತ್ತಿ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು–18,
ದಿನಾಂಕ: 22–3–2011

: ಸುತ್ತೋಲೆ :

ವಿಷಯ: ರಾಜ್ಯದಲ್ಲಿರುವ 'ಎ ಮತ್ತು 'ಬಿ, ಗುಂಪಿನ ದೇವಾಲಯಗಳನ್ನು ಮಾದರಿ ದೇವಾಲಯಗಳನ್ನಾಗಿ ಮಾರ್ಪಡು ಮಾಡುವ ಬಗ್ಗೆ

ರಾಜ್ಯದಲ್ಲಿರುವ ಎ ಮತ್ತು ಬಿ ಗುಂಪಿನ ದೇವಾಲಯಗಳನ್ನು ಮಾದರಿ ಜನೋಪಯೋಗಿ ದೇವಾಲಯಗಳನ್ನಾಗಿ ಮಾರ್ಪಾಡು ಮಾಡಲು ಉದ್ದೇಶಿಸಿದೆ. ಈ ದಿಶೆಯಲ್ಲಿ ದೇವಾಲಯಗಳಲ್ಲಿರಬೇಕಾದ ಮೂಲಭೂತ ಸೌಕರ್ಯಗಳನ್ನು ಪಟ್ಟಿ ಮಾಡಿದೆ. ಸಾಧ್ಯವಾದಷ್ಟು ಮಟ್ಟಿಗೆ ಈ ಎಲ್ಲಾ ಸೌಕರ್ಯಗಳು ದೇವಾಲಯದಲ್ಲಿ ಇರುವಂತೆ ನೋಡಿಕೊಳ್ಳಲು ಈ ಮೂಲಕ ಸೂಚಿಸಿದೆ ಹಾಗೂ ಈ ಕೆಳಕಂಡ ಕಾಮಗಾರಿಗಳನ್ನು ಮೊದಲಿಗೆ ಭಕ್ತಾದಿಗಳಿಂದ, ನಂತರ ಲೋಕೋಪಯೋಗಿ ಇಲಾಖೆ ಅಥವಾ ನಿರ್ಮಿತ ಕೇಂದ್ರ ವತಿಯಿಂದ ನಿರ್ವಹಿಸಿಕೊಂಡು ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು.

1) ದೇವಾಲಯದ ರಾಜಗೋಪುರದ ಮುಂಭಾಗದಲ್ಲಿ ನಾಮಫಲಕ ಅಳವಡಿಸುವುದು: ದೇವಾಲಯದ ನಾಮಫಲಕದ ಮಾದರಿಯನ್ನು ಲೋಕೋಪಯೋಗಿ ಇಲಾಖೆಯವರು ಅಂತಿಮಗೊಳಿಸಿದ್ದು ಅದಕ್ಕೆ ತಗಲುವ ವೆಚ್ಚವನ್ನು ಸಹ ಅಂತಿಮಗೊಳಿಸಿದ್ದಾರೆ. ಆದ್ದರಿಂದ ದೇವಾಲಯದ ವಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯವರನ್ನು ಸಂಪರ್ಕಿಸಿ ನಾಮಫಲಕವನ್ನು ಅಳವಡಿಸಲು ಕ್ರಮ ಜರುಗಿಸುವುದು. 'ಇದಕ್ಕೆ ತಗಲುವ ವೆಚ್ಚವನ್ನು ಲೋಕೋಪಯೋಗಿ ಇಲಾಖೆ/ಇಲಾಖೆಯವರು ಸೂಚಿಸಿದ ಗುತ್ತಿಗೆದಾರರಿಗೆ ಪಾವತಿಸುವುದು ಈ ನಾಮಫಲಕವನ್ನು ದೇವಾಲಯದ

ರಾಜಗೋಪುರಕ್ಕೆ ಎಡ ಭಾಗದಲ್ಲಿ ಕಾಂಪೌಂಡ್ ಸಮಾನಾಂತರವಾಗಿ ಸಾರ್ವಜನಿಕರಿಗೆ ಉತ್ತಮವಾಗಿ ಕಾಣಿಸುವಂತೆ ಅಳವಡಿಸುವುದು.

ಎ) ದೇವಾಲಯದ ಇತಿಹಾಸದ ಸಂಕ್ಷಿಪ್ತ ಮಾಹಿತಿಯ ಫಲಕ : ದೇವಾಲಯದ ಇತಿಹಾಸವನ್ನೊಳಗೊಂಡ ಸಂಕ್ಷಿಪ್ತ ಮಾಹಿತಿಯನ್ನು 15 ರಿಂದ 30 ಸಾಲಿನಲ್ಲಿ ಗ್ರ್ಯಾನೈಟ್ ಕಲ್ಲಿನಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕೆತ್ತಿಸಿ ದೇವಾಲಯದ ಪ್ರಾಕಾರದ ಒಳಗೆ ಭಕ್ತರು ಬಂದಾಗ ಕಾಣಿಸುವಂತೆ ಅಳವಡಿಸಲು ಕ್ರಮ ವಹಿಸುವುದು.

ಬಿ) 2) ದೇವಾಲಯದಲ್ಲಿ ಮಾರ್ಗದರ್ಶನ ನೀಡುವ ಫಲಕಗಳನ್ನು ಅಳವಡಿಸುವ ಬಗ್ಗೆ:– ದೇವಾಲಯದಲ್ಲಿ ಭಕ್ತರು ಮುಂಭಾಗ ಪ್ರವೇಶ ಮಾಡುವ ದ್ವಾರದಿಂದ, ಹೊರಬರುವ ದ್ವಾರದವರೆಗೆ ದೇವಾಲಯದ ಒಳಗಡೆ ಪಡೆಯಬಹುದಾದ ದರ್ಶನ, ಸೌಕರ್ಯಗಳ ಬಗ್ಗೆ ಈ ಕೆಳಕಂಡ ಮಾರ್ಗದರ್ಶನ ಫಲಕಗಳನ್ನು ಭಕ್ತರಿಗೆ ಕಾಣಿಸುವಂತೆ ಸೂಕ್ತ ಸ್ಥಳದಲ್ಲಿ ಅಳವಡಿಸುವುದು.

1) ದೇವಾಲಯದ ಹೆಸರು.

2) ದೇವಾಲಯದಲ್ಲಿ ದರ್ಶನ ಪಡೆಯಬಹುದಾದ ಪರಿವಾರ ದೇವರುಗಳ ವಿವರ.

3) ದೇವಾಲಯಗಳಲ್ಲಿ ನಡೆಯುವ ಸೇವೆಗಳ ವಿವರ ಫಲಕ.

4) ದೇವಾಲಯದಲ್ಲಿ ದೊರಕುವ ಸೌಲಭ್ಯಗಳಾದ ವಸತಿ ಗೃಹಗಳ ಬಗ್ಗೆ, ಸ್ನಾನದ ಮನೆ ಮತ್ತು ಶೌಚಾಲಯಗಳ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ಪ್ರಸಾದ ವಿನಿಯೋಗದ ಸ್ಥಳ ಮತ್ತು ವೇಳಾಪಟ್ಟಿ ಮುಂತಾದವುಗಳ ಬಗ್ಗೆ.

5) ದೇವಾಲಯದ ಸಮೀಪದಲ್ಲಿ ದೊರೆಯಬಹುದಾದ ಇತರೆ ಅಗತ್ಯ ಮಾಹಿತಿಗಳ ಬಗ್ಗೆ.

ಉ.ದಾ: ಅ) ಪೊಲೀಸ್ ಠಾಣೆಗೆ ಇರುವ ದೂರ, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು.

ಆ) ಔಷಧಾಲಯ ಮತ್ತು ಆಸ್ಪತ್ರೆಯ ದೂರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು

ಇ) ರೈಲು ನಿಲ್ದಾಣದ ದೂರದೊಂದಿಗೆ ರೈಲುಗಳು ಬರುವ ಮತ್ತು ಹೊರಡುವ ವಿವರಗಳು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು.

ಈ) ಬಸ್ ನಿಲ್ದಾಣದ ವಿವರ ಹಾಗೂ ಬಸ್‌ಗಳು ಬರುವ ಮತ್ತು ಹೊರಡುವ ವಿವರಗಳು. ದೂರ, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು.

6) ಗರ್ಭಗುಡಿ ಮುಂದೆ ಆಯಾ ದೇವರ ಹೆಸರುಗಳನ್ನು ಹಿತ್ತಾಳೆ ಹಾಳೆಯ ಮೇಲೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕೆತ್ತಿಸಿ ಹಾಕಿಸುವುದು. ಈ ಬಗ್ಗೆ ಮಾದರಿಗಳು ಕೇಂದ್ರ ಕಛೇರಿಯಲ್ಲಿ ಲಭ್ಯವಿರುತ್ತದೆ ಅದರಂತೆ ಉತ್ತಮ ನಾಮ ಫಲಕಗಳನ್ನು ಹಾಕಿಸುವುದು. ಇವುಗಳಿಗೆ ಬಹಳ ಕಾಲ ಹೊಳಪು ಉಳಿಯುವ ಸಲುವಾಗಿ LACQUER POLISH ಮಾಡಿಸುವುದು.

3) ದೇವಾಲಯಕ್ಕೆ ಭೇಟಿ ನೀಡುವ ಹಿರಿಯನಾಗರಿಕರು ಮತ್ತು ಕುಟುಂಬಗಳು ವಿಶ್ರಮಿಸಲು ಆಸನದ ವ್ಯವಸ್ಥೆ ಬಗ್ಗೆ:– ದೇವಾಲಯದ ಹೊರ ಆವರಣದಲ್ಲಿ ಭಕ್ತಾದಿಗಳು ವಿಶ್ರಮಿಸಲು ಸ್ಥಳಕ್ಕೆ ಹಾಗೂ ಆ ಸ್ಥಳಕ್ಕೆ ಹೊಂದಿಕೊಳ್ಳುವಂತೆ ಆಸನಗಳ ವ್ಯವಸ್ಥೆ ಕಲ್ಪಿಸುವುದು. ದೇವಾಲಯದ ಹೊರ ಆವರಣದಲ್ಲಿ, ಪರಿಸರಕ್ಕೆ ಹೊಂದಿಕೊಂಡಂತೆ ಗ್ರಾನೈಟ್ ಕಲ್ಲಿನ ಬೆಂಚುಗಳನ್ನು ಅಥವಾ ಸಿಮೆಂಟ್ ಕಾಂಕ್ರಿಟಿನ ಬೆಂಚುಗಳನ್ನು ಮತ್ತು ಒಳ ಆವರಣಗಳಲ್ಲಿ ಸ್ಟೈನ್‌ಲೆಸ್ ಸ್ಟೀಲ್‌ನಲ್ಲಿ ಮಾಡಿದಂತಹ ಬೆಂಚು ಅಥವಾ ಕುರ್ಚಿಗಳನ್ನು ಅಳವಡಿಸುವುದು. ಇವುಗಳನ್ನು ದೇವಾಲಯದ ವ್ಯಾಪ್ತಿಗೆ ಬರುವ ನಿರ್ಮಿತಿ ಕೇಂದ್ರದಿಂದ ಅಥವಾ ಪುತ್ತೂರಿನ ಮಾಸ್ಟರ್ ಪ್ಲಾನರಿರವರಿಂದ ಖರೀದಿಸುವುದು. ಖರೀದಿಸುವಾಗ ಸರ್ಕಾರಿ ನಿಯಮಗಳನ್ನು ಪಾಲಿಸತಕ್ಕದ್ದು.

4) ಗರ್ಭಗುಡಿ ಮತ್ತು ಮುಂದಿನ ಪ್ರಾಕಾರದಲ್ಲಿ ಹವಾನಿಯಂತ್ರಣ ವ್ಯವಸ್ಥೆ:– ಗರ್ಭಗುಡಿ ಮುಂದೆ ಭಕ್ತಾದಿಗಳು ನಿಂತು ದರ್ಶನ ಮಾಡುವ ಪ್ರಾಕಾರದಲ್ಲಿ ಸಾಧ್ಯವಾದಷ್ಟು ಹವಾನಿಯಂತ್ರಣವನ್ನು ಅಳವಡಿಸುವುದು ; ದೇವಾಲಯದ ವಿನ್ಯಾಸಕ್ಕೆ ಹಾಗೂ ಅವಶ್ಯಕತೆಗೆ ತಕ್ಕಂತೆ ಹವಾನಿಯಂತ್ರಣವನ್ನು ಅಳವಡಿಸುವುದು.

5) ದೇವಾಲಯಗಳಲ್ಲಿ ಜನರೇಟರ್ ವ್ಯವಸ್ಥೆ ಬಗ್ಗೆ:– ದೇವಾಲಯದಲ್ಲಿ ವಿದ್ಯುತ್ ಅಭಾವವನ್ನು ಸರಿದೂಗಿಸಲು INVERTER ಗಳನ್ನು ಅಳವಡಿಸುವುದು, ಅತಿ ಹೆಚ್ಚು ವಿದ್ಯುತ್ ಅಗತ್ಯವಿದ್ದಲ್ಲಿ ಮಾತ್ರ ಜನರೇಟರ್

ವ್ಯವಸ್ಥೆಯನ್ನು ಕಲ್ಪಿಸುವುದು. ದೇವಾಲಯದಲ್ಲಿ ಬೇಕಾಗಬಹುದಾದ ಅಗತ್ಯ ಸಾಮರ್ಥ್ಯವುಳ್ಳ ಸೈಲೆಂಟ್ ಜನರೇಟರ್‌ನ್ನು ಅಳವಡಿಸಲು ಅಂದಾಜಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

6) ಪಾದರಕ್ಷೆಗಳನ್ನು ಬಿಡಲು ನಿಗಧಿತ ಸ್ಥಳವನ್ನು ಗುರುತಿಸುವುದು:– ಭಕ್ತಾದಿಗಳು ಪಾದರಕ್ಷೆಗಳನ್ನು ಬಿಡಲು ನಿಗಧಿತ ಸ್ಥಳವನ್ನು ಗುರುತಿಸಲು ಅದಕ್ಕಾಗಿ ಬೇಕಾಗುವ ಒಂದು ಸ್ಟಾಂಡ್ ಅನ್ನು ನಿರ್ಮಿಸುವುದು, ಜನದಟ್ಟಣೆಯನ್ನು ಅನುಸರಿಸಿ ಪಾದರಕ್ಷೆಗಳನ್ನು ನೋಡಿಕೊಳ್ಳಲು ಹರಾಜು ಮೂಲಕ ಒಪ್ಪಿಸುವುದು. ಒಂದು ಜೊತೆ ಪಾದರಕ್ಷೆಗಳಿಗೆ ರೂ 1/– ಕ್ಕಿಂತ ಹೆಚ್ಚು ವಸೂಲಿ ಮಾಡದಂತೆ ನಿರ್ಬಂಧ ವಿಧಿಸುವುದು. ಒಂದು ಮಾದರಿ ಅಂದಾಜುನಕ್ಷೆಯನ್ನು ತಯಾರಿಸಿ ಸ್ಥಳಕ್ಕೆ ಅನುಗುಣವಾಗಿ ನಿರ್ಮಿಸಲು ಕ್ರಮ ಜರುಗಿಸುವುದು.

7) ದೇವಾಲಯದ ಮುಂಭಾಗದಲ್ಲಿ ಭಕ್ತಾದಿಗಳು ಕಾಲು ತೊಳೆದು ಒಳಗೆ ಪ್ರವೇಶಿಸುವ ವ್ಯವಸ್ಥೆ ಮಾಡುವ ಬಗ್ಗೆ :– ದೇವಾಲಯದ ಮುಂಭಾಗದಲ್ಲಿ ಕಾಲು ತೊಳೆಯಲು ವ್ಯವಸ್ಥೆ ಮಾಡಲು ನೆಲವನ್ನು ಎರಡು ಇಂಚು ಕೆಳಗೆ ಇಳಿಸಿ ಅಲ್ಲಿ ನಳಿಕೆ ಅಳವಡಿಸಿ, ರಂದ್ರಗಳಲ್ಲಿ ನೀರು ಹರಿಯುವಂತೆ ಹಾಗೂ ಹರಿದ ನೀರು ಸರಾಗವಾಗಿ ಹೋರಹೋಗುವಂತೆ ವ್ಯವಸ್ಥೆ ಮಾಡುವುದು. ನಂತರ ಕಾಲಿನ ತೇವ ಹೀರುವುದಕ್ಕಾಗಿ ಹತ್ತಿ ಅಥವಾ ನಾರಿನ ಕಾರ್ಪೆಟ್ ವ್ಯವಸ್ಥೆ ಮಾಡುವುದು. ದೇವಾಲಯದಿಂದ ನಿರ್ಗಮಿಸುವಾಗ ತೇವವಿಲ್ಲದ ಒಣಪ್ರದೇಶವಿರುವಂತೆ ಕ್ರಮ ತೆಗೆದುಕೊಳ್ಳುವುದು ಅಂದರೆ ದೇವಾಲಯದ ಪ್ರವೇಶಿಸುವಾಗ ಕಾಲು ತೊಳೆದುಕೊಳ್ಳಲು ಮತ್ತು ಹಿಂತಿರುಗುವಾಗ ನೆಲವು ತೇವರಹಿತವಾಗಿರುವಂತೆ ಎರಡು ಭಾಗಗಳಾಗಿ ವಿಂಗಡಿಸಲು ಕ್ರಮ ತೆಗೆದುಕೊಳ್ಳುವುದು.

8) ಬಿಸಿಲಿಗೆ ಕಾಲು ಸುಡದಂತೆ ಮಾಡುವ ವ್ಯವಸ್ಥೆ ಬಗ್ಗೆ:– ದೇವಾಲಯದ ಹೊರಪ್ರಾಕಾರದಲ್ಲಿ ಬಿಸಿಲಿನ ತಾಪಕ್ಕೆ ನೆಲ ಕಾಯ್ದು ಭಕ್ತಾದಿಗಳು ಮತ್ತು ಮಕ್ಕಳು ಬರಿಗಾಲಿನಲ್ಲಿ ನಡೆದಾಡುವುದು, ಸರತಿ ಸಾಲಿನಲ್ಲಿ ನಿಲ್ಲುವುದು ಬಹಷ್ಟು ಕಷ್ಟವಾಗುವುದರಿಂದ ತೆಂಗಿನ ನಾರಿನ ಅಥವಾ ರಬ್ಬರ್ ನೆಲಹಾಸನ್ನು ಹಾಕಿಸುವುದು ಹಾಗೂ ತೆಂಗಿನ ನಾರಿನ

ನೆಲಹಾಸಿನ ಮೇಲೆ ನೀರನ್ನು ಚಿಮುಕಿಸಿ ತಣ್ಣಗೆ ಇರುವಂತೆ ನೋಡಿಕೊಳ್ಳುವುದು.

9) ಗೋಪುರ ಹಾಗೂ ದೇವಾಲಯದ ಗೋಡೆಗಳಿಗೆ ಆಂಟಿಫಂಗಸ್" ಪೈಂಟ್‌ಗಳನ್ನುಬಳಿಸುವುದು :– ದೇವಾಲಯದ ಗೋಪುರ ಹಾಗೂ ದೇವಾಲಯದ ಗೋಡೆಗಳಿಗೆ ಉತ್ತಮ ಗುಣಮಟ್ಟದ ಆಂಟಿಫಂಗಸ್ ಪೈಂಟ್‌ಗಳನ್ನು ಬಳಸಲು ದೇವಾಲಯದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಅಥವಾ ನಿರ್ಮಿತಿ ಕೇಂದ್ರದವರಿಂದ ಅಂದಾಜನ್ನು ತಯಾರಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳಲು ಕ್ರಮ ವಹಿಸುವುದು.

10) ಗೋಪುರದ ಮೇಲೆ ಯಾವುದೇ ಗಿಡಗಳು ಬೆಳೆಯದಂತೆ ಸ್ವಚ್ಚತೆಯನ್ನು ಕಾಪಾಡಿಕೊಳುವುದು:– ದೇವಾಲಯದ ಗೋಪುರಗಳ ಮೇಲೆ ಹಾಗೂ ಗೋಡೆಗಳ ಮೇಲೆ ಅಶ್ವತ್ಥಮರ/ಆಲದಮರ ಹಾಗೂ ಇತರೆ ಗಿಡ, ಹುಲ್ಲು ಬೆಳೆದರೆ ದೇವಾಲಯದ ಕಟ್ಟಡದ ಭದ್ರತೆ ಹಾಗೂ ಅಂದವು ಹಾಳಾಗುವ ಸಾಧ್ಯತೆಗಳಿರುವುದರಿಂದ ದೇವಾಲಯದ ಮೇಲ್ಛಾವಣಿ, ಕಾಂಪೌಂಡ್ ಮತ್ತು ಗೋಪುರದ ಮೇಲೆ ಆಗಿಂದಾಗ್ಗೆ ಪರೀಕ್ಷಿಸಿ ಗಿಡ/ಹುಲ್ಲು ಬೆಳೆಯದಂತೆ ನೋಡಿಕೊಳುವುದು ಹಾಗೂ ಅವುಗಳ ಶಾಶ್ವತ ನಿರ್ಮೂಲನೆಗೆ ಅವಶ್ಯ ಕ್ರಮ ವಹಿಸುವುದು ಹಾಗೂ ಮೇಲ್ಛಾವಣಿ ಸೋರುತ್ತಿದ್ದಲ್ಲಿ ಅದಕ್ಕೆ ವಾಟರ್ ಪ್ರೂಫ್ ಮಾಡಿಸಲು ಕ್ರಮ ತೆಗೆದುಕೊಳ್ಳುವುದು.

11) ದೇವಾಲಯದ ಇತಿಹಾಸ ಮತ್ತು ಮಹಿಮೆಗಳನ್ನು ತಿಳಿಸಲು ಕೈಪಿಡಿಯನ್ನು ಮುದ್ರಿಸುವುದು:– ದೇವಾಲಯದ ಇತಿಹಾಸ ಹಾಗೂ ಮಹಿಮೆಗಳ ಮಾಹಿತಿ ಭಕ್ತಾದಿಗಳಿಗೆ ತಿಳಿಸುವ ನಿಟ್ಟಿನಲ್ಲಿ ಭಾವಚಿತ್ರದೊಂದಿಗೆ ಸಂಕ್ಷಿಪ್ತ ಇತಿಹಾಸದ ಕೈಪಿಡಿ ಪುಸ್ತಕಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಭಕ್ತಾದಿಗಳಿಗೆ ಅಲ್ಪ ವೆಚ್ಚದಲ್ಲಿ ಅಂದರೆ ಸುಮಾರು ರೂ10/– ಕ್ಕೆ ಒಂದು ಪುಸ್ತಕ ಸಿಗುವಂತೆ ಕ್ರಮ ತೆಗೆದುಕೊಳ್ಳುವುದು. ಈ ಬಗ್ಗೆ ಈಗಾಗಲೇ ಕೇಂದ್ರ ಕಛೇರಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದು ಅಗತ್ಯ ಮಾಹಿತಿ ಪಡೆಯುವುದು.

12) ದೇವಾಲಯಗಳ ಆವರಣದಲ್ಲಿ ಉದ್ಯಾನವನ/ಕಾರಂಜಿಗಳ ವ್ಯವಸ್ಥೆ ಮಾಡುವುದು:– ದೇವಾಲಯದಲ್ಲಿ ಸ್ಥಳದ ಲಭ್ಯತೆಗೆ ಅನುಗುಣವಾಗಿ ಉದ್ಯಾನವನ ಮತ್ತು ಕಾರಂಜಿ ನಿರ್ಮಿಸಲು ಕ್ರಮ ಜರುಗಿಸುವುದು, ಉದ್ಯಾನವನ ನಿರ್ಮಿಸುವ ಕಾಮಗಾರಿಗಾಗಿ, ದೇವಾಲಯದ ವ್ಯಾಪ್ತಿಯಲ್ಲಿ ಬರುವ ತೋಟಗಾರಿಕಾ ಅಧಿಕಾರಿಗಳನ್ನು ಸಂರ್ಪಕಿಸಿದಲ್ಲಿ ಅವರು ಅಗತ್ಯ ಸಲಹೆ ಹಾಗೂ ಕೆಲಸಗಾರರನ್ನು ಉಚಿತವಾಗಿ ನೀಡಲಿದ್ದು, ಅದಕ್ಕಾಗಿ ಬೇಕಾಗುವ ಸಾಮಾಗ್ರಿಗಳನ್ನು ಮಾತ್ರ ದೇವಾಲಯದ ನಿಧಿಯಿಂದ ಖರೀದಿಸಿ ನೀಡಲು ಹಾಗೂ ಅದರ ನಿರ್ವಹಣೆಯ ಬಗ್ಗೆ ಸೂಕ್ತ ನಿಗಾವಹಿಸಲು ಕ್ರಮ ಜರುಗಿಸುವುದು.

13) ದೇವಾಲಯದ ಗೋಡೆಗಳ ಮೇಲೆ ದೇವರ ಚಿತ್ರಗಳನ್ನು ಬರೆಸಿ ಧಾರ್ಮಿಕ ಮನೋಭಾವವನ್ನುಂಟು ಮಾಡುವುದು :– ದೇವಾಲಯದ ಗೋಡೆಗಳ ಮೇಲೆ ಪರಿಣಿತ ಚಿತ್ರಕಾರರಿಂದ ದೇವಾಲಯದ ಇತಿಹಾಸಕ್ಕೆ ಹೊಂದುವಂತಹ ಚಿತ್ರಗಳನ್ನು ಬರೆಸುವುದು. ಇದರಿಂದ ದೇವಾಲಯದ ಗೋಡೆಗಳು ಶುಭ್ರವಾಗಿರುತ್ತದೆ. ಈ ಚಿತ್ರಗಳು ಬರೆಯುವ ಬಣ್ಣಗಳೂ ನೀರಿನಲ್ಲಿ ಕರಗದೆ ಬಹಳ ಕಾಲ ಉಳಿಯುವಂತೆ ನೋಡಿಕೊಳ್ಳುವುದು

14) ಶುದ್ದ ಹಾಗೂ ತಣ್ಣನೆಯ ಕುಡಿಯುವ ನೀರು ಪೂರೈಕೆ ಮಾಡುವ ಬಗ್ಗೆ :– ಪ್ರತಿ ದೇವಾಲಯದಲ್ಲಿ ಶುದ್ದ ಹಾಗೂ ತಣ್ಣನೆಯ ಕುಡಿಯುವ ನೀರು ಭಕ್ತಾದಿಗಳಿಗೆ ದೊರಕುವಂತೆ ಮಾಡಲು ವಿವಿಧ ರೀತಿಯ ನೀರಿನ ಫಿಲ್ಟರ್ ಒಳಗೊಂಡ ವಾಟರ್ ಕೂಲರ್‌ಗಾಗಿ ಕೇಂದ್ರ ಕಚೇರಿಯಲ್ಲಿ ಟೆಂಡರ್ ಕರೆದು, ಅಂತಿಮಗೊಳಿಸಲಾಗಿದೆ. ದೇವಾಲಯಕ್ಕೆ ಬೇಕಾಗಬಹುದಾದಂತಹ ಅಗತ್ಯ ಸಂಖ್ಯೆಯ ವಾಟರ್ ಕೂಲರ್‌ಗಳನ್ನು ಖರೀದಿಸಿ ಭಕ್ತಾದಿಗಳಿಗೆ ಶುದ್ಧ ಕುಡಿಯುವ ನೀರು ಸಿಗುವಂತೆ ಕ್ರಮ ವಹಿಸುವುದು.

15) ದೇವಾಲಯದಲ್ಲಿ ಸ್ವಚ್ಛತೆ ಪರಿಸರ ಕಾಪಾಡುವ ಬಗ್ಗೆ:– ದೇವಾಲಯದ ಒಳಗೆ ಮತ್ತು ಹೊರ ಅವರಣದಲ್ಲಿ ಭಕ್ತರಿಗೆ ಆಹ್ಲಾದಕರ–ವಾದ ಪರಿಸರ ಓದಗಿಸುವುದು ಹಾಗೂ ಸ್ವಚ್ಛತೆ ಕಾಪಾಡುವ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಮತ್ತು ದೇವಾಲಯದಲ್ಲಿ ದೇವರನಾಮ, ಮತ್ತು

ಸ್ವಚ್ಛತೆ, ಪರಿಸರ, ಭಗವದ್ಗೀತೆ, ದಾಸರವಾಣಿ ಮುಂತಾದ ವಿಷಯಗಳ ಬಗ್ಗೆ ಧ್ಯೇಯ ವಾಕ್ಯಗಳನ್ನು ಶಾಶ್ವತ ಫಲಕಗಳಲ್ಲಿ ಬರೆಸಿ ಹಾಕುವುದು.

16) ದೇವಾಲಯದಲ್ಲಿ ಸೌಂಡ್ ಸಿಸ್ಟಂ ವ್ಯವಸ್ಥೆ ಬಗ್ಗೆ:– ದೇವಾಲಯದಲ್ಲಿ ನಡೆಯುವ ಪೂಜಾ ಕೈಂಕರ್ಯಗಳ ಮಂತ್ರಗಳು, ಸುಪ್ರಭಾತ, ದೇವರನಾಮಗಳು ಭಕ್ತರಿಗೆ ಇಂಪಾಗಿ ಕೇಳುವಂತೆ ಮೇಲುಧ್ವನಿಯಲ್ಲಿ ಧ್ವನಿವರ್ಧಕ (ಮೈಕ್) ಗಳನ್ನು ಅಳವಡಿಸುವುದು.

17) ಕೇಶಮುಂಡನ ಸ್ಥಳ ಗುರುತಿಸುವ ಬಗ್ಗೆ:– ಅಗತ್ಯವಿರುವಲ್ಲಿ ಪದ್ದತಿಗೆ ಅನುಗುಣವಾಗಿ ಕೇಶಮುಂಡನದ ಸ್ಥಳವನ್ನು ಗುರುತಿಸಿ, ಸ್ವಚ್ಚ ಕೊಠಡಿಯನ್ನು ನಿರ್ಮಿಸಲು ಕ್ರಮ ವಹಿಸುವುದು ಹಾಗೂ ಅದಕ್ಕೆ ಹೊಂದಿಕೊಂಡಂತೆ ಅಥವಾ ಹತ್ತಿರದಲ್ಲೆ ಅಗತ್ಯವಿರುವಷ್ಟು ಸ್ನಾನದ ಕೊಠಡಿಗಳ ನಿರ್ಮಾಣದ ವ್ಯವಸ್ಥೆ ಮಾಡುವುದು.

18) ಭಕ್ತಾದಿಗಳಿಗೆ ಲಗೇಜು ಕೊಠಡಿ ನಿರ್ಮಿಸುವ ಬಗ್ಗೆ:– ಭಕ್ತಾದಿಗಳು ತಮ್ಮ ಲಗೇಜುಗಳನ್ನು ಇಟ್ಟು ದೇವರ ದರ್ಶನ ಮಾಡಲು ಅನುವಾಗುವಂತೆ ಅವಶ್ಯಕತೆಗೆ ತಕ್ಕಂತೆ, ದೊಡ್ಡದಾದ/ಚಿಕ್ಕದಾದ ಒಂದು ಲಗೇಜು ಕೊಠಡಿ (ಕ್ಲಾಕ್ ರೂಂ) ವ್ಯವಸ್ಥೆಯನ್ನು ಕಲ್ಪಿಸುವುದು.

19) ಭದ್ರತಾ ಕೊಠಡಿ ನಿರ್ಮಿಸುವ ಬಗ್ಗೆ:– ದೇವಾಲಯದಲ್ಲಿರುವ ಬೆಲೆಬಾಳುವ ಸಾಮಗ್ರಿಗಳನ್ನು ಕ್ರಮ ಬದ್ದವಾಗಿ ಜೋಪಾನವಾಗಿ ಸಂರಕ್ಷಿಸಲು ಅಗತ್ಯಕ್ಕೆ ತಕ್ಕಂತೆ, ಆದ್ಯತೆಯ ಮೇರೆಗೆ ಭದ್ರತಾ ಕೊಠಡಿ ಇಲ್ಲದಿರುವಲ್ಲಿ ಕೂಡಲೇ ನಿರ್ಮಿಸಲು ಅಗತ್ಯ ಕ್ರಮ ವಹಿಸುವುದು. ಈ ಕೊಠಡಿಯನ್ನು ನಿಯಮಗಳಂತೆ ಕಾಂಕ್ರೀಟ್ ಗೋಡೆಗಳು ಅಥವಾ ಕಲ್ಲಿನ ಗೋಡೆಗಳಿಂದ ನಿರ್ಮಿಸುವುದು ಸೂಕ್ತವಾಗಿರುತ್ತದೆ. ಇದಕ್ಕೆ ಉತ್ತಮ ದರ್ಜೆಯ ಬಾಗಿಲು ಅಳವಡಿಸುವುದು ಈ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರದವರಿಂದ ಅಥವಾ ಲೋಕೋಪಯೋಗಿ ಇಲಾಖೆಯ ವತಿಯಿಂದ ಕೈಗೊಳ್ಳಲು ಕ್ರಮ ಜರುಗಿಸುವುದು.

20) ಬಟ್ಟೆ ಬದಲಾಯಿಸುವ ಕೊಠಡಿ ಹಾಗೂ ಶೌಚಾಲಯವನ್ನು ನಿರ್ಮಿಸುವ ಬಗ್ಗೆ:– ಅವಶ್ಯಕತೆಗೆ ತಕ್ಕಂತೆ ಪುರಷರಿಗೆ ಮತ್ತು ಮಹಿಳೆಯರಿಗೆ

ಪ್ರತ್ಯೇಕ ಬಟ್ಟೆ ಬದಲಾಯಿಸುವ ಕೊಠಡಿ ಹಾಗೂ ಶೌಚಾಲಯವನ್ನು ಆಯಾ ಜಿಲ್ಲಾ ನಿರ್ಮಿತಿ ಕೇಂದ್ರ ಅಥವಾ ಲೋಕೋಪಯೋಗಿ ಇಲಾಖೆಗೆ ವಹಿಸಿ ನಿರ್ಮಿಸುವುದು, ನಿರ್ಮಿಸಿದ ನಂತರ ಸ್ವಚ್ಛ ನಿರ್ವಹಣೆ ಮಾಡುವುದು ಹಾಗೂ ಅಗತ್ಯ ಬಿದ್ದಲ್ಲಿ ನಿರ್ವಹಣೆಯನ್ನು ನಿಯಮಾನುಸಾರ ಸೂಕ್ತ ಸಂಸ್ಥೆಗೆ ಹೊರಗುತ್ತಿಗೆ ವಹಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

21) ದೇವಾಲಯಗಳಿಗೆ ವೀಲ್‌ಚೇರ್‌ಗಳನ್ನು ಖರೀದಿಸುವ ಬಗ್ಗೆ:– ಈಗಾಗಲೇ ಇಲಾಖೆಯಿಂದ ಸುತ್ತೋಲೆ ಹೊರಡಿಸಿರುವಂತೆ ಎಲ್ಲಾ ದೇವಾಲಯಗಳಲ್ಲಿ ಅಂಗವಿಕಲರು ಮತ್ತು ವೃದ್ದರಿಗಾಗಿ ದೇವರ ದರ್ಶನ ಪಡೆಯುವ ಅನುಕೂಲಕ್ಕಾಗಿ ವೀಲ್ ಚೇರ್‌ಗಳನ್ನು ಇಟ್ಟುಕೊಳ್ಳುವುದು ಹಾಗೂ ಸ್ಥಳದ ಲಭ್ಯತೆ ಮೇರೆಗೆ ಅವಶ್ಯಕ ಕಡೆಗಳಲ್ಲಿ ವೀಲ್‌ಚೇರ್ ತೆಗೆದುಕೊಂಡು ಹೋಗಲು ರ್‍ಯಾಂಪ್‌ಗಳನ್ನು ಮಾಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.

22) ಕಸದ ಬುಟ್ಟಿಗಳನ್ನು ಇಡುವ ಬಗ್ಗೆ:– ದೇವಾಲಯದ ಗರ್ಭಗುಡಿ, ಪ್ರಕಾರ ಮತ್ತು ಆವರಣಗಳಲ್ಲಿ ಭಕ್ತಾದಿಗಳು ಅನಾವಶ್ಯಕ/ತ್ಯಾಜ್ಯ ವಸ್ತುಗಳನ್ನು ಹಾಕಲು ಎಲ್ಲರಿಗೂ ಕಾಣುವಂತೆ ಅವಶ್ಯಕತೆಗಳಿಗೆ ಅನುಗುಣವಾಗಿ ಕಸದ ಬುಟ್ಟಿಗಳನ್ನು ದೇವಾಲಯದ ಎಲ್ಲಾ ಸ್ಥಳಗಳಲ್ಲಿಟ್ಟು ಸ್ವಚ್ಚತೆಯನ್ನು ಕಾಪಾಡುವುದು. ಈ ಬಗ್ಗೆ ಈಗಾಗಲೇ ಟೆಂಡರ್ ಕರೆದು ಅಂತಿಮಗೊಳಿಸಲಾಗಿದೆ. ಅದರಂತೆ ಅಥವಾ ತಮ್ಮ ಹಂತದಲ್ಲೆ ಉತ್ತಮ ಕಸದ ಬುಟ್ಟಿಗಳನ್ನು ತೆಗೆದುಕೊಳ್ಳುವುದು ಅಥವಾ ಕೇಂದ್ರ ಕಚೇರಿಯ ಟೆಂಡರ್‌ಗಳಂತೆ ಕೊಳ್ಳುವುದು.

23) ಕ್ಯಾಮೆರಾ ಮತ್ತು ಸಿ.ಸಿ. ಟಿ.ವಿ ಯನ್ನು ಒದಗಿಸುವ ಬಗ್ಗೆ ಪ್ರಸ್ತಾವನೆ:– ದೇವಾಲಯಗಳ ಗರ್ಭಗುಡಿಯಲ್ಲಿ ನಡೆಯುವ ಪೂಜಾದಿಗಳನ್ನು ಹೊರಗಿನಿಂದ ಜನರು ವೀಕ್ಷಿಸಲು ಹಾಗೂ ಹುಂಡಿ ಭದ್ರತಾ ಕೊಠಡಿಯ ರಕ್ಷಣೆ ಮುಂತಾದವುಗಳನ್ನು ದುಷ್ಕರ್ಮಿಗಳಿಂದ ರಕ್ಷಿಸುವ ದೃಷ್ಟಿಯಿಂದ ಹಾಗೂ ಮುಂಜಾಗೃತಾ ದೃಷ್ಟಿಯಿಂದ ದೇವಾಲಯಗಳಲ್ಲಿನ ಪ್ರಮುಖ ಸ್ಥಳಗಳಲ್ಲಿ ಕ್ಯಾಮೆರಾ ಮತ್ತು ಸಿ.ಸಿ. ಟಿ.ವಿಗಳನ್ನು ನಿಯಮಾನುಸಾರ ಖರೀದಿಸಿ ಕ್ರಮಬದ್ಧವಾಗಿ ಅಳವಡಿಸಲು ಕ್ರಮ ವಹಿಸುವುದು. ಈ

ವ್ಯವಸ್ಥೆಯು ಮುಂದಿನ ದಿನಗಳಲ್ಲಿ ದೇವಸ್ಥಾನದಲ್ಲಿ ನಡೆಯುವ ಎಲ್ಲಾ ಕಾರ್ಯಗಳನ್ನು ಕೇಂದ್ರ ಕಛೇರಿಯಲ್ಲಿ ವೀಕ್ಷಿಸಲು ಅವಕಾಶವುಳ್ಳದ್ದಾಗಿರಬೇಕು.

24) ದೇವಾಲಯಗಳಲ್ಲಿ ಒಳಚರಂಡಿ ಮತ್ತು ಎಕ್ಸಾಸ್ಟ್ ಫ್ಯಾನ್‌ಗಳ ವ್ಯವಸ್ಥೆ:- ದೇವಾಲಯಗಳಲ್ಲಿ ಗರ್ಭಗುಡಿಯ ಅಭಿಷೇಕದ ನೀರು ಹಾಗೂ ಹೊರ ಪ್ರಾಕಾರಗಳನ್ನು ತೊಳೆದ ಕಲುಷಿತ ನೀರು ಸರಾಗವಾಗಿ ಹೊರ ಹೋಗುವಂತೆ ಸೂಕ್ತ ಒಳಚರಂಡಿ ವ್ಯವಸ್ಥೆಯನ್ನು ಮಾಡಿ, ದೇವಾಲಯದ ಗರ್ಭಗುಡಿ ಹಾಗೂ ಪ್ರಾಕಾರಗಳನ್ನು ದುರ್ಗಂಧ ಬಾರದ ಹಾಗೆ. ಸದಾ ಸುವಾಸನೆಯೊಂದಿಗೆ ಶುಚಿತ್ವದಿಂದ ಕಾಪಾಡುವುದು. ಹಾಗೂ ಅವಶ್ಯವಿದ್ದಷ್ಟು ಗಾಳಿ ಹೊರಹೋಗುವ ಎಕ್ಸಾಸ್ಟ್ ಫ್ಯಾನ್ ಗಳನ್ನು ಅಳವಡಿಸಲು ಕ್ರಮ ಜರುಗಿಸುವುದು.

25) ದೇವಾಲಯದಲ್ಲಿ ಶೆಲ್ಟರ್ ವ್ಯವಸ್ಥೆ ಬಗ್ಗೆ:- ಭಕ್ತಾದಿಗಳು ದೇವಾಲಯಕ್ಕೆ ಅಗಮಿಸಿದಾಗ ದೇವರನ್ನು ದರ್ಶನ ಮಾಡುವ ಸಂಧರ್ಭದಲ್ಲಿ ಸರತಿ ಸಾಲಿನಲ್ಲಿ ನಿಲ್ಲುವ ಕಡೆಗಳಲ್ಲಿ ಹಾಗೂ ಪ್ರಾಕಾರದಲ್ಲಿ ಪ್ರದಕ್ಷಿಣೆ ಹಾಕುವ ಸ್ಥಳಗಳಲ್ಲಿ ಬಿಸಿಲಿನ ತಾಪ ತಲೆಗೆ ಬೀಳದಂತೆ ಸಾಧ್ಯವಾದಲ್ಲಿ ತಲೆ ಮೇಲೆ ಶೆಲ್ಟರ್ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವುದು.

26) ಪ್ರಾಕಾರ ಮತ್ತು ಆವರಣದ ನೆಲಹಾಸು ಸಮತಟ್ಟಾಗಿರುವ ಬಗ್ಗೆ:- ದೇವಾಲಯದ ಅವರಣದಲ್ಲಿ ಯಾವುದೇ ಕಸ ಕಡ್ಡಿಗಳು ಬೀಳದಂತೆ ನೋಡಿಕೊಂಡು ಕಾಲಕಾಲಕ್ಕೆ ಶುಭ್ರವಾಗಿ ಗುಡಿಸಿ, ಕಲ್ಲುಚಪ್ಪಡಿ ಅಥವಾ ಗ್ರಾನೈಟ್/ಮಾರ್ಬಲ್ ನೆಲಹಾಸು ಸಮತಟ್ಟಾಗಿರುವಂತೆ ನೋಡಿಕೊಂಡು, ಓಡಾಡುವಾಗ ಭಕ್ತಾದಿಗಳ ಕಾಲಿಗೆ ಯಾವುದೇ ರೀತಿಯ ಅಡ್ಡಿಯಾಗದಂತೆ ಕ್ರಮ ವಹಿಸಿ ಸದಾ ಸ್ವಚ್ಚವಾಗಿರಿಸಿಕೊಳುವುದು.

27) ದೇವಾಲಯದ ಸೇವಾರ್ಥ ವಿವರಗಳನ್ನು ಫಲಕಗಳಲ್ಲಿ ಅಳವಡಿಸುವ ಬಗ್ಗೆ:- ದೇವಾಲಯಗಳಲ್ಲಿ ನಡೆಯುವ ಸಂಪೂರ್ಣ ಸೇವಾ ವಿವರಗಳನ್ನು ಭಕ್ತಾದಿಗಳ ಗಮನಕ್ಕೆ ಬರುವಂತಹ ಜಾಗಗಳಲ್ಲಿ ಹಾಗೂ ದೇವಾಲಯದ ಮುಂಭಾಗದಲ್ಲಿ ಎಲ್ಲರಿಗೂ ಸ್ಪಷ್ಟವಾಗಿ/ಸುಲಭವಾಗಿ ಕಾಣುವಂತೆ ಬರೆಸುವುದು. ದೇವಾಲಯಗಳಲ್ಲಿ ನಡೆಯುವ ನಿತ್ಯ

ಸೇವೆ/ಶಾಶ್ವತ ಸೇವೆ ಇನ್ನಿತರ ವಿಶೇಷ ಹಾಗೂ ಹೆಚ್ಚುವರಿ ಸೇವೆಗಳ ಬಗ್ಗೆ ಭಕ್ತರ ಗಮನಕ್ಕೆ ಬರುವ ರೀತಿಯಲ್ಲಿ ಫಲಕ/ ಬಿತ್ತಿ ಪತ್ರಗಳನ್ನು ಬರೆಸಿ ಭಕ್ತಾದಿಗಳ ಗಮನಕ್ಕೆ ತರುವುದು.

28) ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ನೌಕರರಿಗೆ ಸಮವಸ್ತ್ರ ವಿತರಿಸುವ ಬಗ್ಗೆ:– ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುವ ಒಳಾಂಗಣ ನೌಕರರಾದ, ಅಗಮಿಕರು ಪ್ರಧಾನ ಅರ್ಚಕರು ಸಹಾಯಕ ಅರ್ಚಕರು, ಮಂತ್ರಪುಷ್ಪ, ಪಾರಿಚಾರಕರು ಇವರುಗಳಿಗೆ ಅವರವರ ಹುದ್ದೆಗಳಗನುಸಾರವಾಗಿ ಪಂಚೆ(ಮಗಟ) ಮತ್ತು ಶಲ್ಯಗಳಲ್ಲಿ ಬಣ್ಣಗಳನ್ನು ಗುರುತಿಸುವಂತೆ ವಿವಿಧ ಬಣ್ಣದ ವಸ್ತ್ರಗಳನ್ನು ಕೇಂದ್ರ ಕಛೇರಿಯ ಸುತೋಲೆಯನ್ವಯ ಧರಿಸಲು ದೇವಾಲಯದ ವತಿಯಿಂದ ಸರಬರಾಜು ಮಾಡುವುದು ಹಾಗೂ ಹೊರಾಂಗಣ ನೌಕರರಾದ ಜವಾನರು, ಕಸಗುಡಿಸುವವರು, ಡೋಲು ಬಾರಿಸುವವರು, ಹಾಗೂ ಅತಿಥಿಗಳನ್ನು ಬರಮಾಡಿಕೊಂಡು ಶಿಷ್ಟಾಚಾರದಂತೆ ಕರೆದುಕೊಂಡು ಹೋಗುವವರು, ಸೆಕ್ಯೂರಿಟಿ ಗಾರ್ಡ್‌ಗಳು ಮುಂತಾದವರಿಗೆ ಸಮವಸ್ತ್ರ, ಬ್ಯಾಡ್ಜ್ ಮತ್ತು ಕ್ಯಾಪ್‌ಗಳನ್ನು ವಿವಿಧ ಬಣ್ಣಗಳಿಂದ ಕೂಡಿದಂತೆ ಕೇಂದ್ರ ಕಚೇರಿಯ ಮಾರ್ಗದರ್ಶನದಂತೆ ವ್ಯವಸ್ಥೆಯನ್ನು ಮಾಡಿ, ಅವರಿಗೂ ಸಹ ವರ್ಷಕ್ಕೆ 2 ಜೊತೆ ಸಮವಸ್ತ್ರವನ್ನು ದೇವಾಲಯದ ವತಿಯಿಂದ ಸರಬರಾಜು ಮಾಡುವುದು.

29) ದೇವಾಲಯದ ಆವರಣ/ಗರ್ಭಗುಡಿಯ ಶುಚಿತ್ವದ ಬಗ್ಗೆ:– ದೇವಾಲಯದ ಒಳ ಆವರಣವನ್ನು ಸಹ ಶುಚಿಯಾಗಿ ಶುಭ್ರವಾಗಿ ಇಡಲು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದು. ದೇವಾಲಯದ ಆವರಣದಲ್ಲಿ ಹೊಗೆಯಿಂದ ಎಲ್ಲಿಯೂ ಕಪ್ಪು ಕಟ್ಟದಂತೆ ಕ್ರಮ ಕೈಗೊಳುವುದು ಹಾಗೂ ಈ ರೀತಿ ಕಪ್ಪು ಕಟ್ಟಿದ್ದಲ್ಲಿ ಕೂಡಲೇ ತೆಗೆಸುವುದು ಹಾಗೂ ಆಗಿಂದಾಗ್ಗೆ ಶುಚಿಗೊಳಿಸು–ವುದು. ಗರ್ಭಗುಡಿಗಳನ್ನು ಸದಾ ಶುಚಿಯಾಗಿಟ್ಟುಕೊಂಡು ಸುಗಂಧಭರಿತ ದ್ರವ್ಯಗಳನ್ನು ಲೇಪಿಸಿ ಸುವಾಸನೆಯಿಂದ ಕೂಡಿರುವಂತೆ ನೋಡಿಕೊಳ್ಳುವುದು. ಕ್ರಿಮಿ ಕೀಟಗಳಿದ್ದಲ್ಲಿ ಅವುಗಳನ್ನು ನಿವಾರಿಸಲು ರಾಜ್ಯ ಉಗ್ರಾಣ ನಿಗಮದ

ಅಧಿಕಾರಿಗಳನ್ನು ಸಂಪರ್ಕಿಸಿ, ಅವರಿಂದ ಕ್ರಿಮಿಕೀಟ ನಿವಾರಿಸುವತ್ತ ಅಗತ್ಯ ಸೇವೆ ಪಡೆದು ಅವರಿಗೆ ಹಣ ಪಾವತಿಸಲು ಕ್ರಮ ತೆಗೆದುಕೊಳ್ಳುವುದು.

30) ದೇವಾಲಯಗಳಲ್ಲಿ ಪಾಕಶಾಲೆ/ ಅಡುಗೆ ಮನೆಯ ಶುಚಿತ್ವದ ಬಗ್ಗೆ:– ಪ್ರಸಾದ ಮತ್ತು ದಾಸೋಹ ಸಿದ್ದಪಡಿಸುವ ಕಡೆ ಹೆಚ್ಚು ಗಮನ ಹರಿಸಿ ಶುದ್ಧ ಮತ್ತು ಉತ್ತಮ ಪ್ರಸಾದ ಸಿದ್ದಪಡಿಸಿ ವಿನಿಯೋಗಿಸಲು ಕ್ರಮ ತೆಗೆದುಕೊಳ್ಳುವುದು. ಊಟದ ಮನೆಗಳನ್ನು 3 ಅಥವಾ 6 ತಿಂಗಳಿಗೊಮ್ಮೆ ಶುಚಿ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳುವುದು. ಊಟದ ಮನೆಯಲ್ಲಿ ಅಡಿಗೆ ಮಾಡುವ ವ್ಯವಸ್ಥೆ ಮತ್ತು ಪಾತ್ರೆಗಳ ಬಗ್ಗೆ ಗಮನ ಹರಿಸಿ, ಬದಲಿಸುವ ಅಗತ್ಯವಿದ್ದಲ್ಲಿ ಕೂಡಲೇ ಪ್ರಸ್ತಾವನೆ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಅಲ್ಯೂಮೀನಿಯಂ ಪಾತ್ರೆಗಳನ್ನು ಬಳಸಬಾರದು. ಸಾಧ್ಯವಾದಷ್ಟು ಮಟ್ಟಿಗೆ ಸೇಲಂ ಸ್ಟೈನ್‌ಲೆಸ್ ಸ್ಟೀಲ್, ಸ್ಟೀಮ್ / ಗ್ಯಾಸ್ ವ್ಯವಸ್ಥೆಗಳಿಗೆ ಅದ್ಯತೆ ನೀಡುವುದು.

31) ಭಕ್ತಾದಿಗಳ ಅನಿಸಿಕೆಗಳ ಬಗ್ಗೆ:– ಮೇಲಿನ ಅಂಶಗಳಲ್ಲದೆ ದೇವಾಲಯಗಳಲ್ಲಿ ಬೇರೆ ಯಾವುದಾದರೂ ಭಕ್ತರಿಗೆ ಅನುಕೂಲವಾಗುವಂತಹ ಕಾಮಗಾರಿಗಳು ಅಗತ್ಯವಿದ್ದಲ್ಲಿ ತಿಳಿಸುವುದು ಮತ್ತು ಭಕ್ತಾದಿಗಳ ಅನಿಸಿಕೆಗಳನ್ನು ಪಡೆದು ಅವುಗಳ ಬಗ್ಗೆ ಸಹ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು.

ಸಹಿ/–

(ಬಿ.ಜಿ.ನಂದಕುಮಾರ್, ಭಾ.ಆ.ಸೇ)
ಆಯುಕ್ತರು.
ಧಾರ್ಮಿಕ ದತ್ತಿ ಇಲಾಖೆ.

ಗೆ,

1) ಎಲ್ಲಾ ಜಿಲ್ಲಾಧಿಕಾರಿಗಳು– 30
2) ಎಲ್ಲಾ ಉಪ–ವಿಭಾಗಾಧಿಕಾರಿಗಳಿಗೆ–60
3) ಎಲ್ಲಾ ತಹಶೀಲ್ದಾರ್‌ಗಳಿಗೆ–176 ಮುಂದಿನ ಸೂಕ್ತ ಕ್ರಮವಹಿಸಲು
4) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ–204– 150
5) ಎಲ್ಲಾ ಜಿಲ್ಲಾ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ.–50
6) ಎಲ್ಲಾ ಜಿಲ್ಲಾ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ–30
7) ಸ್ಥಾಯಿ ಕಡತ
8) ಹೆಚ್ಚುವರಿ

ಸಹಿ
ಆಯುಕ್ತರ ಪರವಾಗಿ
ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿ ಇಲಾಖೆ.
ಚಾಮರಾಜಪೇಟೆ, ಬೆಂಗಳೂರು–560 018